ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ, ಫಲಹೆಗಳ ಮೇಲೆ, ಸರಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಅಂದಾಜು ಸಮಿತಿಯ ನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ಮೇಲ್ಕಂಡ ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ.

SRI J. A. FERNANDEZ.—I wish to present the Second Report of the Committee on Papers laid on the Table.

ಅಧ್ಯಕ್ಷರು.—ಮೇಲ್ಕಂಡ ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ನಿಲುವಳಿ ಸೂಚನೆಯ ಪ್ರಸ್ತಾವ (ಅನುಮತಿ ಕೋರಿಕೆ)
ರಾಜ್ಯದಲ್ಲಿ ತಲೆದೋರಿರುವ ಭೀಕರ ಬರದ ಬಗ್ಗೆ

ಅಧ್ಯಕ್ಷರು.—ಈಗ ಅಡ್ಜರ್ನ್‌ಮೆಂಟ್ ಮೋಷನ್. ಒಟ್ಟು ೪ ನಾಲ್ಕು ಜನ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದಾರೆ. ಎಂ. ಎಸ್. ಕೃಷ್ಣನ್‌ರವರು ಈ ದಿನ ಬೆಳಿಗ್ಗೆ ೯–೫೫ಕ್ಕೆ ಕೊಟ್ಟಿದ್ದಾರೆ. ೧೦–೨೦ ಗಂಟೆಗೆ ಆರ್. ವೆಂಕಟರಾಮಯ್ಯನವರು ಕೊಟ್ಟಿದ್ದಾರೆ. ೧೦–೪೦ ಗಂಟೆಗೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಕೊಟ್ಟಿದ್ದಾರೆ. ೧೦–೪೫ ಗಂಟೆಗೆ ಎಂ. ಎಂ. ಖಿರ್ಗಿಯವರು ಕೊಟ್ಟಿದ್ದಾರೆ. ಈ ನಾಲ್ಕು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ನಾನು ಯಾವುದನ್ನೂ ರಿಜೆಕ್ಟ್ ಮಾಡುವುದಕ್ಕೆ ಹೋಗಿಲ್ಲ. ಆದರೆ, ಎಂ. ಎಸ್. ಕೃಷ್ಣನ್‌ರವರು ಮೊದಲಂ ಕೊಟ್ಟಿರುವುದರಿಂದ ಅವರದನ್ನು ಮೊ ದ ಲಂ ತೆಗೆದುಕೊಳ್ಳೋಣ. ಮಾನ್ಯ ಮಂತ್ರಿಯವರು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಇನ್ನೇನಾದರೂ ವಿಷಯ ಇದ್ದಲ್ಲಿ, ಮಧ್ಯಾಹ್ನ ೩ ಗಂಟೆಗೆ ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ಅದರಲ್ಲಿ ಎಲ್ಲಾ ಮಾತನಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಬಿಸ್‌ನೆಸ್ ಅಡ್ವೈಸರಿ ಕಮಿಟಿ ಬಗ್ಗೆ ತಮ್ಮಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಹೋದಸಾರಿ ಸೆಷನ್ ಕರೆದಾಗಲೂ ಬಿಸ್‌ನೆಸ್ ಅಡ್ವೈಸರಿ ಕಮಿಟಿಗೆ ನಮ್ಮಲ್ಲಿ ಯಾರನ್ನೂ ಕರೆಯಲಿಲ್ಲ. ಅವರೇ ಎಲ್ಲಾ ಸೇರಿಕೊಂಡು ಬಿಸ್‌ನೆಸ್‌ನ್ನು ಫಿಕ್ಸ್ ಮಾಡಿದ್ದಾರೆ, ಟೈಮ್ ಮುಂತಾದವುಗಳನ್ನೆಲ್ಲಾ ಫಿಕ್ಸ್ ಮಾಡಿದ್ದಾರೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿ ಇರುವುದೂ, ನಾವು ಅವರು ಎಲ್ಲರೂ ಸೇರಿಕೊಂಡು ಸದನದ ಬಿಸ್‌ನೆಸ್‌ನ್ನು ಹೇಗೆ ನಡೆಸಬೇಕೆಂದೂ ಸಮಯವನ್ನು ಫಿಕ್ಸ್ ಮಾಡಬೇಕು. ಅದು ಬಿಟ್ಟು ಅವರು ಹೇಳಿದ್ದನ್ನೇ ಕೇಳಿಕೊಂಡು ತಾವೇ ಬಿಸ್‌ನೆಸ್‌ನ್ನು ಫಿಕ್ಸ್ ಮಾಡುವ ಹಾಗಿದ್ದರೆ ನಾವು ಇಲ್ಲಿಗೆ ಬರುವ ಅಗತ್ಯವೂ ಇಲ್ಲ. ಬಿಸ್‌ನೆಸ್‌ಗೆ ಸಹಕಾರ ಕೊಡುವುದಕ್ಕೆ ಸಾಧ್ಯವೂ ಇಲ್ಲವೆಂದು ಹೇಳಬೇಕಾಗುತ್ತದೆ. ನಿಯಮದಂತೆ ನಡೆಯಬೇಕಾದುದು ಅತ್ಯಗತ್ಯವಾಗಿದೆ. ಬಿಸ್‌ನೆಸ್ ಬಗ್ಗೆ ನಮಗೆ ಏನೂ ಗೊತ್ತಿಲ್ಲದೆ, ಟೈಮ್ ಎಷ್ಟು ಫಿಕ್ಸ್ ಮಾಡಿದ್ದಾರೆಂಬುದು ಗೊತ್ತಿಲ್ಲದೆ ನಾವು ಹೇಗೆ ಮಾತನಾಡುವುದು ? ತಾವು ಅವರ ಜೊತೆಯಲ್ಲಿ ಸೇರಿಕೊಂಡು ತಾವೇ ಎಲ್ಲಾ ಮಾಡುವುದಾದರೆ.....

ಅಧ್ಯಕ್ಷರು.—ನಾನೇ ಎಲ್ಲವನ್ನು ಮಾಡಬೇಕೆಂಬುದೇನೂ ಇಲ್ಲ. ಇವತ್ತು ೩ ಗಂಟೆಗೆ ಬಿಜಿನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ಹೋದ ಸಾರಿ ಏನು ಆಗಿತ್ತು ಎಂದರೆ, ಎಲ್ಲಾ ಪಕ್ಷದ ನಾಯಕರು. ವಿರೋಧ ಪಕ್ಷದ ನಾಯಕರು ಹಾಗೂ ಸಭಾ ನಾಯಕರು ಸೇರಿ, ಆಗಸ್ಟ್ ತಿಂಗಳ ಕೊನೆಯಲ್ಲಿ ಸಭೆ ಕರೆಯುವುದೆಂದು ಅಂದೇ ನಿಶ್ಚಯವಾಗಿತ್ತು. ಈಗ ೧೦ ದಿವಸ ಅಧಿವೇಶನ ನಡೆಯುತ್ತದೆ. ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಈ ದಿನ ಮಧ್ಯಾಹ್ನ ಕರೆದಿದ್ದೇನೆ. ತಾವು ನನ್ನ ಚೇಂಬರ್‌ನಲ್ಲಿ ಬಿಸ್‌ನೆಸ್ ಫಿಕ್ಸ್ ಮಾಡಿರುವ ಬಗ್ಗೆ ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಚೇಂಬರ್‌ನಲ್ಲಿ ಮಾತನಾಡುವ ವಿಷಯ ಬೇರೆ. ರೂಲ್ಸ್ ಪ್ರಕಾರ ನಡೆಯಬೇಕಾದುದು ನಡೆಯಬೇಕಾಗುತ್ತದೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಬಿಸ್‌ನೆಸ್‌ನ್ನು ಫಿಕ್ಸ್ ಮಾಡದೇ ೧೦ ದಿವಸ ಅಸೆಂಬ್ಲಿ ನಡೆಯುತ್ತದೆ ಎಂದರೆ ಹೇಗೆ ? ನಾನು ಮಂತ್ರಿ ಮಂತ್ರಿಯವರಿಗೂ ಎರಡು ಮೂರು ಪತ್ರಗಳನ್ನು ನಮ್ಮ ರಾಜ್ಯದಲ್ಲಿ ಬಂದಿರುವ ಬರಗಾಲದ ಬಗ್ಗೆ ಬರೆದು ತಿಳಿಸಿದ್ದೇನೆ. ಬರದ ಪರಿಸ್ಥಿತಿಯ ಬಗ್ಗೆ ಮಾತನಾಡುವುದನ್ನು ಬಿಟ್ಟು ಯಾವುದು ಮುಂಚೆ ಬಂದಿದೆಯೋ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಹೇಗೆ ? ಯಾವ ಯಾವ ವಿಷಯದ ವೈಟೇಜ್ ಏನು ಎಂಬುದನ್ನು ತಿಳಿದುಕೊಂಡು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಿ.

ಅಧ್ಯಕ್ಷರು.—೩ ಗಂಟೆಗೆ ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ತಾವು ಬನ್ನಿ. ಅಲ್ಲಿ ತೀರ್ಮಾನ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರದ ವಿಚಾರದಲ್ಲಿ ಈ ದಿವಸ ಒಂದು ಹೇಳಿಕೆಯನ್ನು ಮಂತ್ರಿ ಕೇಂದ್ರ ಸರ್ಕಾರಕ್ಕೆ ಕೊಟ್ಟ ಮನವಿಯನ್ನು ಸದಸ್ಯರುಗಳಿಗೆ ಕೊಡುತ್ತೇನೆ. ಬರದ ಬಗ್ಗೆ ತಾವು ಯಾವಾಗ ಚರ್ಚೆ ಮಾಡಬೇಕೆಂದು ಹೇಳಿದರೆ ಆವಾಗ ಮಾಡೋಣ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ, ನಮ್ಮ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯು ಬಹಳ ಗಂಭೀರವಾಗಿದೆ. ಈ ಬರಗಾಲದ ಬಗ್ಗೆ ಮಾತ ನಾಡುವುದು ಸೂಕ್ತ. ಈಗ ಕೇವಲ ೧೦ ದಿನಸ ಮಾತ್ರ ಅಸೆಂಬ್ಲಿ ನಡೆಯಬೇತ್ತದೆ. ಬರಗಾಲದ ಬಗ್ಗೆ ಮಾನ್ಯ ಮಂತ್ರಿಯವರು ಬರೀ ಸ್ಟೇಟ್‌ಮೆಂಟನ್ನು ಕೊಟ್ಟರೆ ಸಾಲದು, ಬರಗಾಲದ ಬಗ್ಗೆ ಚರ್ಚೆ ಮಾಡಬೇಕು ಹಾಗೂ ಸರ್ಕಾರವು ರಾಜ್ಯದಲ್ಲಿ ಬಂದಿರುವ ಬರಗಾಲವನ್ನು ನಿವಾರಣೆ ಮಾಡುವುದಕ್ಕೆ ಏನೇನು ಕೆಲಸಗಳನ್ನು ಮಾಡಿದೆ ಎಂಬ ಬಗ್ಗೆಯೂ ಸಹ ಹೇಳಬೇಕು.

ಅಧ್ಯಕ್ಷರು.—ಮಧ್ಯಾಹ್ನ ಮೂರರಿ ಗಂಟೆಗೆ ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ಅಲ್ಲಿ ಬರಗಾಲದ ಬಗ್ಗೆ ಯಾವಾಗ ಚರ್ಚೆ ಮಾಡಬೇಕೆಂಬುದನ್ನು ತೀರ್ಮಾನ ಮಾಡೋಣ. ಈಗ ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತಾರೆ ಕೇಳಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ವಿಚಾರವು ಬಹಳ ಮಹತ್ವದ ವಿಚಾರವಾಗಿದೆ. ಬರಗಾಲದ ಕಾಮಗಾರಿಗಳ ಬಗ್ಗೆ ಎಲ್ಲಾ ಸದಸ್ಯರಿಗೂ ಮಾಹಿತಿಯನ್ನು ಕೊಡುವುದು ಸರ್ಕಾರದ ಕರ್ತವ್ಯ, ಬರಗಾಲ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕ ಮನವಿಯ ಪತ್ರವನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ,—ಅಧ್ಯಕ್ಷರೇ ನಾವು ಚರ್ಚೆಗೆ ಸಿದ್ಧರಾಗಿದ್ದೇವೆ ಎಂದರು ಮಾನ್ಯ ಸಚಿವರು ಹೇಳುತ್ತಿದ್ದಾರೆ, ಹಾಗೆಯೇ ಬರಗಾಲ ಪರಿಸ್ಥಿತಿಯ ಬಗ್ಗೆ ಕೇಂದ್ರ ಸರಕಾರದವರಿಗೆ ಕೊಟ್ಟಂತಹ ಮನವಿಯ ಪ್ರತಿಗಳನ್ನು ಹಂಚುತ್ತೇವೆ ಎಂದು ಕೂಡ ಹೇಳಿದ್ದಾರೆ, ಇಪ್ಪೊತ್ತು ನಿಲುವಳಿ ಸೂಚನೆಯ ಪಂಜಾಂತರ ಅಥವಾ ಬೇರೆ ಯಾವುದೇ ನಿಯಮಗಳ ಪ್ರಕಾರ ಈ ಬರಗಾಲ ಪರಿಸ್ಥಿತಿಯ ಬಗ್ಗೆ ಇಲ್ಲಿ ವಿಶೇಷವಾಗಿ ಎತ್ತತಕ್ಕಂಥ ಒಂದು ಸಂದರ್ಭ ಇದಾಗಿದೆ. ಇಂತಹ ಸಂದರ್ಭದಲ್ಲಿ ನಾವುಗಳು ನಮ್ಮ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಲು ನಮಗೆ ಇಂತಹ ವರದಿಗಳನ್ನು ಮುಂಚಿತವಾಗಿ ಕೊಟ್ಟರೆ, ಅದನ್ನು ಅಭ್ಯಸಿಸಿ ಸೂಕ್ತ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅನುಕೂಲವಾಗುತ್ತದೆ. ಆದರೆ ಮಾನ್ಯ ಕಂದಾಯ ಸಚಿವರು ಈಗ ವರದಿಯನ್ನು ಸದಸ್ಯರಿಗೆ ಒದಗಿಸುವ ವಿಪ್ರಾಡು ಮಾಡುತ್ತೇವೆ, ಎಂದು ಹೇಳಿದರೆ ಅದು ಸರಿಯೇ ? ಕೇಂದ್ರ ಸರಕಾರದವರಿಗೆ ಒಪ್ಪಿಸಿದ ಮನವಿಯ ಪ್ರತಿಗಳನ್ನು ನಮಗೆ ಮೊದಲೇ ಏಕೆ ಕೊಟ್ಟಿಲ್ಲ ? ಅಂತಹ ವರದಿಗಳನ್ನು ಮುಂಚಿತವಾಗಿ ಕೊಟ್ಟಲ್ಲಿ ನಾವು ಚರ್ಚೆಗೆ ಸಿದ್ಧರಾಗಿ ಬರಬಹುದು.....

ಅಧ್ಯಕ್ಷರು.—ನಿಮಗೆಲ್ಲರಿಗೂ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದಲೇ ಹಾಗೆ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಆ ವರದಿಯನ್ನು ನಮಗೆ ಕೊಟ್ಟಿದ್ದರೆ ನಾವುಗಳು ಚರ್ಚೆಗೆ ತಯಾರಾಗಿ ಬರುವುದಕ್ಕೆ ಅನುಕೂಲವಾಗುತ್ತಿತ್ತು. ಈಗ ಬರಗಾಲದ ಪರಿಸ್ಥಿತಿಯ ವಿಷಯವನ್ನು ಬಿಟ್ಟು ಬೇರೆ ಯಾವ ವಿಷಯವನ್ನೂ ಚರ್ಚೆಗೆ ತೆಗದುಕೊಂಡರೂ ಸಹ ಅದು ಯೋಗ್ಯವಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅದು ಕರ್ನಾಟಕದ ಜನತೆಗೂ ಕೂಡ ಒಪ್ಪಿಗೆಯಾಗಲಾರದು. ಕಾರಣ ಇದು ಅತೀ ಪ್ರಾಮುಖ್ಯವಾದುದು, ನಮ್ಮ ರಾಜ್ಯದಲ್ಲಿನ ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಬೇರೆ ವಿಚಾರಗಳನ್ನು ಈಗ ಚರ್ಚೆ ಮಾಡಿದರೆ ಸರಿಯಾಗಲಾರದು.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾವು ೨೭ನೇ ತಾರೀಖಿಗೆ ಮನವಿಯನ್ನು ಕೊಟ್ಟಿದ್ದೇವೆ. ಸದಸ್ಯರಿಗೆ ಕೊಡುವ ಪ್ರತಿಗಳು ೩೧ನೇ ತಾರೀಖಿಗೆ ಸಿದ್ಧವಾಗಿ ಇದ್ದುವು.

ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಪೋಸ್ಟ್ ಮೂಲಕ ಕಳುಹಿಸಿದರೆ ಸರಿಯಾಗಿ ಮುಟ್ಟುತಕ್ಕಂಥ ಸಂದರ್ಭ ಇರಲಿಲ್ಲ ಅದಕ್ಕಾಗಿ ಈಗ ಕೊಡುವ ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮೆಮೊರಾಂಡಂ ಕೇಂದ್ರಕ್ಕೆ ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಮನವಿಯನ್ನು ಕಳುಹಿಸುವ ಮೊದಲು ಪ್ರಜಾ ಪ್ರಭುತ್ವದ ನೆಲೆಯಲ್ಲಿ ವಿರೋಧ ಪಕ್ಷದವರನ್ನು ಕರೆದು ಜನರ ಕಷ್ಟ-ಸುಖಗಳ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿ, ಅನುಕೂಲ, ಅನಾನುಕೂಲಗಳನ್ನು ಅವರೊಂದಿಗೆ ಕೇಳಿಕೊಂಡು, ಅವರ ಕಳಕಳಿಯನ್ನು ಅರ್ಥ ಮಾಡಿಕೊಂಡು ಒಂದು ಮನವಿಯನ್ನು ತಯಾರು ಮಾಡಿಕೊಡಬೇಕಾಗಿತ್ತು. ಆದರೆ ಹಾಗೆ ತಾವು ಮಾಡಲಿಲ್ಲ. ನಿಮಗೆ ಯಾವಾಗ ಕಷ್ಟ ಬರುತ್ತದೆ, ಆಗ ವಿರೋಧ ಪಕ್ಷದವರ ಸಹಾಯವನ್ನು ಕೇಳುತ್ತೀರಿ. ಮೊದಲು ತಮ್ಮನ್ನು ನಾನು ಅಭಿನಂದಿಸ ಬೇಕಾಗಿದೆ. ಏಕೆಂದರೆ ಇವೊತ್ತು ತಾವುಗಳು ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಾರಂಭ ಮಾಡಿದ್ದೀರಿ. ಈಗ ಮಾನ್ಯ ಸಚಿವರು ಯಾವುದೋ ಒಂದು ಮನವಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸುತ್ತೇವೆ, ಅದಕ್ಕಾಗಿ ನಮಗೆ ಸಹಾಯ ಮಾಡಿ ಸಹಕಾರ ನೀಡಿ, ಎಂದು ಹೇಳಿದರೆ ಹೇಗೆ ? ಹೋದ ಸಲ ಬರಗಾಲ ಪರಿಸ್ಥಿತಿಯ ನಿವಾರಣೆ ಬಗ್ಗೆ ಏನಾಯಿತು ? ಎಷ್ಟು ಖರ್ಚು ಆಯಿತು ? ಅದರ ಫಲ ಏನು ಬಂತು ? ಯಾರು ಯಾರು ಎಷ್ಟೆಷ್ಟು ತಿಂದು ಹಾಕಿದರು.....

ಅಧ್ಯಕ್ಷರು.—ತಾವುಗಳು ದಯವಿಟ್ಟು ಈಗ ಕುಳಿತುಕೊಳ್ಳಬೇಕು. ಮೂರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಕೆ. ಎಚ್. ಪಾಟೀಲ್.—ನಾವು ಸವಿವರವಾದ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಹಾಗೆ ಜನರ ಕಷ್ಟ ಸುಖಗಳ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡದಿದ್ದರೆ ಏನು ಪ್ರಯೋಜನ ? ನಾವು ಜನರ ಪ್ರತಿನಿಧಿಗಳಾಗಿ ಇಲ್ಲಿ ಪ್ರಾಮಾಣಿಕವಾದ ಸೇವೆಯನ್ನು ಮಾಡಬೇಕಾಗುತ್ತದೆ. ನಾವು ನಮಗೆ ರುವ ನೈತಿಕ ಮೌಲ್ಯಗಳನ್ನು ಮಾರಿಕೊಂಡು ಇಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಹೋದ ಸಲ ಕೇಂದ್ರ ಸರಕಾರದವರಿಂದ ಬಂದಂತಹ ಹಣ ಇಲ್ಲಿ ದುರಪಯೋಗ ಆಗಿದೆ ಎಂದು ಆಪಾದನೆಗಳು ಇರುವಾಗ ಅದು ಸಂಳ್ಳು ಎಂದು ಹೇಳಿದರೆ, ನಾವು ಅದನ್ನು ಸಂಮ್ಮನೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಬಗ್ಗೆ ಕೂಡ ಚರ್ಚೆ ನಡೆಯಬೇಕು. ಅದನ್ನು ಬಿಟ್ಟು ನಾವು ಮನವಿಯನ್ನು ಕಳುಹಿಸಿದ್ದೇವೆ, ಆ ಬಗ್ಗೆ ಇಲ್ಲಿ ಸದಸ್ಯರಿಗೆ ವರದಿಯನ್ನು ಕೊಡುತ್ತೇವೆ, ಚರ್ಚೆ ಮಾಡೋಣ ಎಂದು ಹೇಳಿದರೆ ಹೇಗೆ..... ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ತಾವುಗಳು ಪತ್ರಿಕೆಗಳಲ್ಲಿ ಓದಿರಬಹುದು. ನಾನು ಬಿಜಾಪುರ ಭಾಗದಲ್ಲಿ ಟೂರ್ ಮಾಡುತ್ತಾ ಇರುವಾಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳವರಿಗೆ ಅಲ್ಲಿನ ಪರಿಸ್ಥಿತಿಯ ಕುರಿತು ಹತ್ತು ಪೇಜ್‌ಗಳ ಒಂದು ಕಾಗದವನ್ನು ಬರೆದಿದ್ದೇನೆ. ಆಗ ಇನ್ನೂ ನಿಮ್ಮ ಮನವಿ ಅಲ್ಲಿಗೆ ಹೋಗಿರಲಿಕ್ಕಿಲ್ಲ. ಅನಂತರ ಹೋಯಿತು ಎಂದು ಕಾಣುತ್ತದೆ. ಇದಾದ ನಂತರ ಮಾನ್ಯರು ಒಂದು ಪತ್ರಿಕಾ ಪ್ರಕಟಣೆಯನ್ನು ಕೊಟ್ಟರು. ಈ ಬಗ್ಗೆ ನಮಗೆ ಮೆಮೊರಾಂಡಂ ತಾವುಗಳು ತೋರಿಸಿದ್ದೀರಾ ? ಮೊದಲು ಕೇಳಿದಾಗ ಫಸ್ಟ್ ಲಿಸ್ಟ್ ಹೊರಟು ಹೋಯಿತು ಎಂದು ಹೇಳಿದರು. ಈಗ ಮತ್ತೆ ನಮ್ಮ ಸಹಕಾರವನ್ನು ಕೇಳುತ್ತಿದ್ದಾರೆ. ಬರಗಾಲ ಪರಿಹಾರ ಕೆಲಸವನ್ನು ಮಾಡಿಸುತ್ತೇವೆ. ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಪ್ರೆಸ್‌ನಲ್ಲಿ ಪಾತ್ರ ಉತ್ತರ ಕೊಡುತ್ತಾರೆ. ಬಿ. ಎ. ಸಿ. ಮೀಟಿಂಗ್‌ಗೆ ನಮ್ಮನ್ನು ಈಗ ಬನ್ನಿ ಎಂದು ಹೇಳತ್ತಿದ್ದೀರಿ.

ಅಧ್ಯಕ್ಷರು.—ಈ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಮಧ್ಯಾಹ್ನ ಮೂರು ಗಂಟೆಗೆ ಬಿಎಸಿ ಮೀಟಿಂಗ್ ಇಟ್ಟಿದ್ದೇನೆ. ಅಲ್ಲಿ ಚರ್ಚೆ ಮಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವೇ ನಮ್ಮನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳುವುದಿಲ್ಲ ನಾವು ಏನು ಮಾಡಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದೆ ನಡೆದ ಸರ್ಕಾರದ ಪದ್ಧತಿಯಂತೆ ವೈ ರಾಂಡ್‌ಮ್ ಕೊಡುವಾಗ ವಿರೋಧ ಪಕ್ಷದ ನಾಯಕರನ್ನು ಕೇಳಿ, ಅವರಿಗೆ ತೋರಿಸಿ ಕೂಡ ಕೊಡುತ್ತಿರಲಿಲ್ಲ ಈಗ ಆ ಸಲಹೆ ಬಂದಿದೆ, ಬೇಕಾದರೆ ಮುಂದೆ ಕೊಡೋಣ ಇನ್ನು ಶ್ರೀ ಕೆ. ಹೆಚ್. ಪಾಟೀಲ್

ಅವರು ಹಿಂದೆ ಬಂದ ಹಣ ಏನಾಗಿದೆ, ಆ ಹಣ ದುರುಪಯೋಗವಾಗಿದೆ ಎಂದಿದ್ದಾರೆ. ಈ ಸದನಕ್ಕೆ ಆ ಹಣದ ಲೆಕ್ಕವನ್ನು ವಿವರಗಳನ್ನು ನಾವು ಕೊಟ್ಟಿದ್ದೇವೆ. ಹಾಗೆಯೇ ತನಿಖೆಯ ವಿವರಗಳನ್ನೂ ಕೊಟ್ಟಿದ್ದೇವೆ. ಇನ್ನೂ ಏನಾದರೂ ಇದ್ದರೆ ಚರ್ಚೆ ನಡೆಯುವಾಗ ಹೇಳಲಿ, ಆಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ ಅಲ್ಲದೆ ಮೆಮೊರಾಂಡಮ್ ಕಾಪಿಗಳನ್ನು ಎಲ್ಲಾ ಲೋಕಸಭಾ ಸದಸ್ಯರಿಗೆ ಕೊಟ್ಟಿದ್ದೇವೆ ಇಲ್ಲಿ ಇವತ್ತು ಹಂಚುತ್ತಿದ್ದೇವೆ.

ಅಧ್ಯಕ್ಷರು.—ಆಯಿತು ಈ ಬಗ್ಗೆ ಮಧ್ಯಾಹ್ನ ಸದನದ ಕಾರ್ಯಕಲಾಪ ಸಮಿತಿ ಸೇರಿದ ನಂತರ ತಾವುಗಳು ಮಾತನಾಡಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಇಲ್ಲಿ ಪ್ರಾಮುಖ್ಯವಾದ ವಿಚಾರವಿದೆ.

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ, ಈ ವಿಷಯ ಮುಗಿಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೀಗೆ ನಾನು ಮಾತನಾಡಲು ನಿಂತ ಕೂಡಲೇ ನೀವು ಮಾತ ನಾಡಿದರೆ ನಾನು ಏಕೆ ಮಾತನಾಡಬೇಕು ?

ಅಧ್ಯಕ್ಷರು.—ವಿನಾಕಾರಣವಾಗಿ ಅನಾವಶ್ಯಕವಾಗಿ ನೀವು ಮಾತನಾಡಿದರೆ ಹೇಗೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ವಿನಾಕಾರಣ ಮಾತನಾಡಲು ತಯಾರಿಲ್ಲ ಆದರೆ ಇದು ಮಹತ್ವದ ವಿಚಾರ ಇದೆ.

(ಗದ್ದಲ)

ಅಧ್ಯಕ್ಷರು.—ನೀವು ಹೇಳುವುದಕ್ಕೆ ಮಹತ್ವ ಇಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಅನಾವಶ್ಯಕವಾದದ್ದು ಯಾವುದನ್ನು ಮಾತನಾಡಿದ್ದೆ ನೆಂದು ತಾವು ಹೇಳಬೇಕು.

ಅಧ್ಯಕ್ಷರು.—ನಾನು ಹೇಳಿದ್ದುದು ಆ ವಿಷಯ ಮುಂಗಡ ಮೇಲೆ ನೀವು ಮಾತನಾಡುತ್ತಿರುವಿರಿ ಎಂದು ಇವತ್ತು ಆ ಅಜರ್ನ್‌ಮೆಂಟ್ ಮೋಷನ್ ಬಂದಿದೆ ನಿಮ್ಮದಕ್ಕಿಂತ ಮೊದಲು ಅವರದು ಬಂದಿದೆ. ಬರದ ಮೇಲಿನ ಚರ್ಚೆ ಬಗ್ಗೆ ಇವತ್ತು ೩ ಗಂಟೆಗೆ ಬಿಎಸಿ ಮೀಟಿಂಗ್‌ನಲ್ಲಿ ತೀರ್ಮಾನವಾದ ಮೇಲೆ ತಾವು ಮಾತನಾಡಬಹುದಲ್ಲ ಎಂದು ನಾನು ಹೇಳಿದ್ದುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಸದನದಲ್ಲಿ ಸೌಜನ್ಯಕ್ಕೆ ಸ್ಥಾನ ಇಲ್ಲವೆಂದಾದರೆ ನಾನು ಮಾತನಾಡುವುದಿಲ್ಲ. I am not prepared to talk. I will sit. ನಾನು ಯಾವುದನ್ನು ಅನಾವಶ್ಯಕವಾಗಿ ಹೇಳಿದ್ದೇನೆ ಎಂಬುದನ್ನು ಸಭಾಪತಿಗಳು ತೋರಿಸಿಕೊಟ್ಟರೆ ತಮ್ಮ ಆಜ್ಞೆಯನ್ನು ನಾನು ಶಿರಸಾವಹಿಸಿ ಪಾಲಿಸಿ ಕ್ಷಮಿತಾಯಿಸಿಕೊಳ್ಳುತ್ತೇನೆ ತಾವು ಬೆಳಿಗ್ಗೆಯಿಂದ ಒಂದು ರೀತಿಯಲ್ಲಿ ಸದಸ್ಯರ ಮೇಲೆ ಗದಾಪ್ರಹಾರ ಮಾಡುತ್ತಿದ್ದೀರಿ ಇದನ್ನು ತಮ್ಮಿಂದ ನಾವು ನಿರೀಕ್ಷೆ ಮಾಡುವುದಿಲ್ಲ.

ಅಧ್ಯಕ್ಷರು.—ನನಗೂ ಜವಾಬ್ದಾರಿ ಗೊತ್ತಿದೆ ನಾನು ಏಕೆ ಹೇಳಿದೆ ಎಂದರೆ ಸರ್ಕಾರ ಚರ್ಚೆಗೆ ಸಿದ್ಧವಿದೆ ಎಂದು ಹೇಳಿದೆ ಮತ್ತು ಇವತ್ತು ೩ ಗಂಟೆಗೆ ಬಿಎಸಿಯಲ್ಲಿ ತೀರ್ಮಾನವಾಗಿ ಅನಂತರ ಇದು ಚರ್ಚೆಯಾಗಲಿ ಎಂದು ಹೇಳಿಬಿಟ್ಟಿದೆ ಸರ್ಕಾರ ಆದ್ದರಿಂದ ಈಗ ಬೇರೆ ವಿಷಯ ತೆಗೆದುಕೊಳ್ಳೋಣ ಎಂಬ ಉದ್ದೇಶ ನನ್ನದು.

ಶ್ರೀ ಎಸ್. ಬಂಗಾರಪ್ಪ,—ತಾವು ಹೇಳುವುದನ್ನು ನೋಡಿದರೆ ತಮ್ಮ ಹತ್ತಿರ ತುಂಬಾ ಮಾತ ನಾಡುವುದು ಇದ್ದ ಹಾಗೆ ಕಾಣುತ್ತಿದೆ. ಈಗ ನಾವು ಮಾತನಾಡುತ್ತೇವೆ ಇಲ್ಲ ನೀವು ಮಾತನಾಡಿ.

ಅಧ್ಯಕ್ಷರು.—ನನ್ನ ಬಗ್ಗೆ ಈ ರೀತಿ ಮಾತನಾಡುವುದು ಬೇಡ ಮಾನ್ಯ ಮೊಯ್ಲಿಯವರೇ ನೀವು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಮೊದಲೇ ನೀವು ಅವಕಾಶ ಕೊಟ್ಟಿದ್ದರೆ ಈ ಸಮಯವೆಲ್ಲ ಉಳಿತಾಯ ವಾಗುತ್ತಿತ್ತೋ ಏಕೆ ನೀವು ಹೀಗೆ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ಪ್ರಾಮುಖ್ಯ ವಾದಂತಹ ವಿಚಾರಗಳನ್ನು.....

(ಗೊಂದಲ)

ಅಧ್ಯಕ್ಷರು.--ಮಾನ್ಯ ಸಚಿವರು ಚರ್ಚೆ ಮಾಡಲಿಕ್ಕೆ ಒಪ್ಪಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಅವರೂ ಇನ್ನೂ ಏನೂ ಹೇಳಲಿಲ್ಲ.....

(ಗೊಂದಲ)

ಅಧ್ಯಕ್ಷರು.--ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.--ಮೂರು ಗಂಟೆಗೆ ಬಿಜಿನೆಸ್ ಅಡ್ವೈಜರಿ ಕಮಿಟಿ ಇದೆ ಅದನ್ನು ನಾನೂ ಕೂಡ ಒಪ್ಪುತ್ತೇನೆ. ನನ್ನ ಮಂನಸ್ಸಿನಲ್ಲಿ ಏನಿದೆ ಎಂಬುದನ್ನು ತಾವೇನಾದರೂ ತಿಳಿದುಕೊಳ್ಳಿವುದಿದ್ದರೆ ನಾನು ಕುಳಿತುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.--ನಾನು ಹೇಳುವುದು ಎರಡು ವಿಚಾರ ವಿಷಯಾಂತರ ಮಾಡುತ್ತೇನೆಂದು ಭಯ ಪಡಬೇಡಿ.

ಅಧ್ಯಕ್ಷರು.--ನಾನು ಭಯ ಪಡುವುದಕ್ಕೆ ಬಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.--ತಾವು ಹೇಳಿದಿರಿ ಮೂರು ಗಂಟೆಗೆ ಬಿಜಿನೆಸ್ ಅಡ್ವೈಜರಿ ಕಮಿಟಿ ಇದೆ ಅಲ್ಲಿ ಚರ್ಚೆ ಮಾಡೋಣವೆಂದು ಮುಂದೆ ತಪ್ಪಾಗಬಾರದೆಂದು ನನ್ನ ಸೂಚನೆ ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರುತ್ತಿದ್ದೇನೆ ಮೊನ್ನೆ ಕೂಡ ೫-೧೦ ನಿಮಿಷದಲ್ಲಿ ಅಡ್ಜರ್ನ್ ಮಾಡಿದಿರಿ ಬಹುಶ: ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ೫ ಗಂಟೆ ಅಲ್ಲ ಎರಡು ನಿಮಿಷದಲ್ಲಿ ಅಡ್ಜರ್ನ್ ಮಾಡಿದ್ದರೆ ಈ ಸಭೆಗೆ ಒಂದು ಶೋಭೆ ತರುತ್ತಿತ್ತು. ಆದರೆ ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಂದು ಕಪ್ಪು ಚುಕ್ಕೆಇಟ್ಟಂತೆ ಸಡನ್ ಆಗಿ ಸಭೆ ಅಡ್ಜರ್ನ್ ಆಯಿತು. The entire House should have been taken into confidence, ಬಿಜಿನೆಸ್ ಇಲ್ಲದಿದ್ದರೆ ಅಡ್ಜರ್ನ್ ಮಾಡೋಣವೆಂದು ಮೊದಲೇ ಹೇಳಬಹುದಿತ್ತು ಬಿಜಿನೆಸ್ ಲಿಸ್ಟ್ ಅನ್ನು ತಯಾರು ಮಾಡುವ ಮೊದಲು ಸದಸ್ಯರಿಗೆ ಅದನ್ನು ಕಳಿಸುವ ಮೊದಲು ಬಿಜಿನೆಸ್ ಅಡ್ವೈಜರಿ ಕಮಿಟಿ ಕರೆದು ಅದರಲ್ಲಿ ಚರ್ಚೆ ಮಾಡುತ್ತಿದ್ದೀರಿ. ಇವತ್ತಿಗೂ ಕೂಡ ಹತ್ತು ದಿವಸದ ಮೊದಲು ಅತ್ಯಂತ ಪ್ರಮುಖವಾದ ಸಮಸ್ಯೆಗಳು ನಮ್ಮ ಕರ್ನಾಟಕದಲ್ಲಿ ಇವೆ ಜ್ವಲಂತ ಸಮಸ್ಯೆ ಬರಗಾಲ ಸಮಸ್ಯೆ ಇದೆ ಈ ವಿಷಯದ ಬಗ್ಗೆ ಇವತ್ತು ಚರ್ಚೆ ಮಾಡಿದರೆ ಕರ್ನಾಟಕದ ಜನತೆ ತಮ್ಮನ್ನು ಮತ್ತು ಈ ಸದನವನ್ನು ಮೆಚ್ಚುತ್ತಿದ್ದರು. ಇದು ಮೊದಲನೇ ವಿಚಾರ ಇದನ್ನು ಬದಿಗೊತ್ತಿ ಯಾವುದೇ ವಿಚಾರವನ್ನು ಪ್ರಸ್ತಾಪಮಾಡಿದರೆ ಅದು ಸರಿ ಬರುವುದಿಲ್ಲ ಎರಡನೇ ವಿಚಾರ ಸದನದ ಸತ್ಸಂಪ್ರದಾಯಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಮಾನ್ಯ ವಿರೋಧ ಪಕ್ಷದ ನಾಯಕಿಯವರು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಅನ್ನು ತಮ್ಮ ಮುಖಾಂತರ ನೀಡಿದ್ದಾರೆ ತಾವು ಕೆಲವು ಪರಂಪರೆಗಳನ್ನು ನೋಡಬೇಕು ಕಡೆಯ ಪಕ್ಷ ೫ಟನೇ ಇಸವಿಯಲ್ಲಿ ನಡೆದಂತಹ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ ಈ ಸದನದ ನಾಯಕರ ನಂತರ ವಿರೋಧ ಪಕ್ಷದ ನಾಯಕರು ಇಂತಹವರು ೯-೩೦ಕ್ಕೆ ಕಳಿಸಿದ್ದಾರೆ ಇವರು ಇಷ್ಟು ಗಂಟೆಗೆ ಕಳಿಸಿದ್ದಾರೆ. ಇವರು ಕಳಿಸಿದಂತಹ ಅಡ್ಜರ್ನ್‌ಮೆಂಟ್ ನೋಟೀಸ್ ಇಷ್ಟು ಗಂಟೆಗೆ ಬಂತು ಎಂದು ತಾವು ಓದಿದಿರಿ ನಿಯಮಾವಳಿ ಪ್ರಕಾರ ಈ ಸಭೆ ನಡೆಯುವ ಮೊದಲು ಸೂಚನೆಯನ್ನು ಕೊಡಬೇಕೆಂದು ಇದೆ ಅವರು ಕೊಟ್ಟಿದ್ದಾರೆ ಬುಲೆಟಿನ್ ಕೊಡುವುದು ಪ್ರತ್ಯೇಕ ಕೊಟ್ಟರಬಹುದು ತಾವು ಇದು ಒಂದು ಹಕ್ಕು ಇದನ್ನು ತಾವು ನಿಯಂತ್ರಣಗೊಳಿಸಬಹುದು ಆದರೆ ಅದನ್ನು ಚುಕ್ತಿಗೊಳಿಸುವ ಇಲ್ಲವೇ ಮೊಟಕುಗೊಳಿಸಲಿಕ್ಕೆ ಯಾರಿಗೂ ಕೂಡಾ ಅಧಿಕಾರವಿಲ್ಲ ಈಗ ಇರುವ ಪ್ರಶ್ನೆ ಏನೆಂದರೆ ವಿಧಾನ ಸಭೆಯಲ್ಲಿ ವಿರೋಧ ಪಕ್ಷದಲ್ಲಿದ್ದಂತಹ ಒಬ್ಬ ನಾಯಕಿಯವರು ಒಂದು ಸೂಚನೆಯನ್ನು ಕೊಟ್ಟಾಗ ಅದು ಅತಿ ಪ್ರಾಮುಖ್ಯವಾಗಿರುತ್ತದೆ. ಆ ಸ್ಥಾನಕ್ಕೆ ಪ್ರಥಮ ರೆಕಗ್ನಿಷನ್ ಕೊಟ್ಟಿದ್ದೀರಿ. It is not only for privileges outside.....ಅವರು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟು ಮಾತನಾಡಲು ಎದ್ದು ನಿಂತಾಗ ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡತಕ್ಕಂಥಾದ್ದು ಈ ಸದನದ ಈ ವಿಧಾನ ಸಭೆಯ ಒಂದು ಪರಂಪರೆ ಇವತ್ತು ಆ ಪರಂಪರೆಯನ್ನು ಬದಲಾವಣೆ ಮಾಡತಕ್ಕಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ

ವಿರೋಧ ಪಕ್ಷದ ನಾಯಕಿಯವರು ಸೂಚನೆ ಕೊಟ್ಟ ಮೇಲೂ ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡದಿದ್ದರೆ, ಈ ವಿಧಾನ ಸಭೆಯ ಪರಂಪರೆಗನುಗುಣವಾದ ಒಂದು ಪ್ರವೃತ್ತಿ ಆಗುವುದಿಲ್ಲ ಅದಂ ಸತ್ ಪರಂಪರೆಯಾಗುವುದಿಲ್ಲ. ಹಿಂದಿನ ಚರಿತ್ರೆಯನ್ನು ತಾವು ನೋಡಬೇಕು ಹಿಂದೆ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು, ನಾನೂ ಕೂಡ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ ಅವರಿಗೆ ಪ್ರಥಮ ಪ್ರಾಶಸ್ತ್ಯವನ್ನು ಯಾವಾಗಲೂ ನಾವು ಕೊಟ್ಟಿದ್ದೇವೆ ಅವರಿಗೆ ಅವಕಾಶ ಕೊಡದಿದ್ದರೆ ವಿಧಾನ ಸಭೆಯಂ ವಿರೋಧ ಪಕ್ಷದ ನಾಯಂಕಿಯಂವರ ಸ್ಥಾನಕ್ಕೆ ಅಪರ ಪಾವಿತ್ರತೆಗೆ ಧಕ್ಕೆ ಬರುತ್ತದೆ ಎಂಬುದನ್ನು ಮನಗಂಡು ಇದಕ್ಕೆ ಪರಿಹಾರವನ್ನು ತಾವು ಹುಡುಕಬೇಕಂ ಇದರ ಬಗ್ಗೆ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡಿ ಇದನ್ನು ಬದಲಾವಣೆ ಮಾಡತಕ್ಕಂಥದ್ದಕ್ಕೆ ದಯವಿಟ್ಟು ಹೋಗಬಾರದೆಂದು ತಮ್ಮಲ್ಲಿ ನನ್ನ ಕಳಕಳಿಯ ಪ್ರಾರ್ಥನೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನಂ ನಿಲುವಳಿ ಸೂಚನೆಯ ಬಗ್ಗೆ ಮಾತನಾಡುತ್ತಿಲ್ಲ. ಒಂದು ವಿಷಯಂ ಪಾತ್ರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಪರಂಪರೆ ವಿಚಾರದ ಬಗ್ಗೆ ಮಾನ್ಯ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. ಪರಂಪರೆಯನ್ನು ಕಾಯತಕ್ಕಂಥದ್ದು ಅವರಿಗೆ ಅದರಲ್ಲಿ ಎಷ್ಟು ಆಸಕ್ತಿ ಇದೆಯೋ, ನಮಗೂ ಅಷ್ಟೇ ಆಸಕ್ತಿ ಇದೆ. ತಾವು ಇನ್ನೂ ಯಾವುದೇ ರೂಲಿಂಗನ್ನು ಕೊಟ್ಟಿಲ್ಲ. ನಾನಂ ತಮ್ಮನ್ನು ಕೇಳಿಕೊಂಡಾಗ ತಾವೇನು ಹೇಳಿದಿರಿ ಎಂದರೆ ನಾಳ್ಕೆ ದುರ್ ಅಡ್ವರ್ಟ್‌ಮೆಂಟ್ ಮೋಷನ್ ಬಂದಿವೆ ಅದರಲ್ಲಿ ಮೊದಲನೆಯದು ಇಂತಿಷ್ಟು ಗಂಟೆಗೆ, ಇಂತಿಂಥವರು ಇಂತಿಷ್ಟು ಗಂಟೆಗೆ, ಕೃಷ್ಣನ್‌ರವರಂ ಇಂತಿಷ್ಟು ಗಂಟೆಗೆ ಕೊಟ್ಟಿದ್ದಾರೆ ಎಂದಂ ಹೇಳಿದ್ದಾರೆ. ಇದಲ್ಲಾ ಅಡ್ಜರ್ನ್‌ಮೆಂಟ್ ಮೋಷನ್ ಸೇರಿದ ಮೇಲೆ ತಾವು ಪ್ರಸ್ತಾಪ ಮಾಡಿದ್ದೀರಿ ಸ್ಪೀಕರ್‌ರವರು ಇಂಥದ್ದೇ ಮೊದಲಂ ತೆಗೆದುಕೊಳ್ಳಿ ಎಂದಂ ಏನಾದರೂ ಹೇಳಿದ್ದಾರೆಯೇ ?

ಶ್ರೀ ಎಂ.ಎಸ್. ಕೃಷ್ಣನ್.—ಹೇಳಿದರು.

(ಗೊಂದಲ)

ಅಧ್ಯಕ್ಷರು.—ಇವರು ಕೊಟ್ಟಿದ್ದಾರೆ. ಮಾನ್ಯ ಬೊಮ್ಮಾಯಿಯವರಂ ಒಂದು ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಮೂರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆದಿದ್ದೇವೆ. ಇದು ಬಹಳ ಪ್ರಾಮಂಖ್ಯವಾದ ವಿಚಾರ. ರೂಲ್ ೬೮ರ ಪ್ರಕಾರ ಇದರ ಬಗ್ಗೆ ಚರ್ಚೆ ಮಾಡೋಣ ಇದಕ್ಕೆ ಚರ್ಚೆಗೆ ಅವಕಾಶ ಕೊಡಬೇಕಂ ಎಂದು ಹೇಳಿದ್ದಾರೆ. ೬೮ರ ಪ್ರಕಾರ ಅವಕಾಶ ಕೊಡಬೇಕು ಎಂದು ಬೊಮ್ಮಾಯಿಯವರಂ ಕೂಡಾ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಏನಾದರೂ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಅಲೌ ಮಾಡಿದ್ದೀರಾ ?

ಅಧ್ಯಕ್ಷರು.—ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದ್ದರಿಂದ ಯಾವುದೇ ಪರಂಪರೆಗೆ ಭಂಗ ಬರದಂತೆ...

SRI M. MALLIKARJUNA KHARGE.—Hon'ble Member is permitted to put up his case.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯಂ ವಿಚಾರ ಮಾನ್ಯ ಕೃಷ್ಣನ್‌ರವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.ಬರಗಾಲದ ವಿಚಾರದಲ್ಲಿ ಅಭಾವ ಪರಿಸ್ಥಿತಿ ವಿಚಾರದಲ್ಲಿ ಒಂದು ಮೆಮೊರಾಂಡಂನ್ನು ತಯಾರು ಮಾಡಿದ್ದೇವೆ. ವಿರೋಧಪಕ್ಷದ ನಾಯಕರ ಜೊತೆ ಮತ್ತು ಇನ್ನಿತರ ಪಕ್ಷದ ನಾಯಕರುಗಳ ಜೊತೆ ಚರ್ಚೆಮಾಡಿ ಅದನ್ನು ಮುಗಿಸಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎನ್ನುವ ಪ್ರಸ್ತಾವ ಸೂಚನೆಯನ್ನು ಶ್ರೀಮತಿ ನಾಗರತ್ನಮ್ಮನವರು ಮಾಡಿದ್ದಾರೆ. ಬಾಕಿಯವರಂ ಕೂಡಾ ಮಾಡಿದ್ದಾರೆ. ಆ ಸೂಚನೆಯನ್ನು ಇನ್ನು ಮುಂದೆ ಗಮನದಲ್ಲಿಟ್ಟುಕೊಳ್ಳುತ್ತೇವೆ. ಸ್ವಲ್ಪಮಟ್ಟಿಗೆ ಅವಸರವಾಗಿ ಕಳುಹಿಸ ತಕ್ಕಂಥ ಪ್ರಸಂಗ ಏತಕ್ಕೆ ಬಂತು ಎಂದು ಹೇಳಿದರೆ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆ ಎಂದಂ ಮೊದಲು

ವರದಿಯನ್ನು ತಯಾರು ಮಾಡಿದ್ದೆವೋ ಆ ಭಾಗದಲ್ಲಿ ಮಳೆ ಬಂತು. ಈಗ ನಾವು ಅದರ ಬಗ್ಗೆ ತಿದ್ದುಪಡಿಯನ್ನು ಮಾಡದೇ ಮೆಮೊರಾಂಡಂನ್ನು ಕಳುಹಿಸಿದರೆ ಆ ಟೀಮ್‌ನವರು ಬಂದು ವಿಸಿಟ್ ಮಾಡಿದಾಗ, ಅಲ್ಲಿ ನೋಡಿದಾಗ ನಾವು ಕಳುಹಿಸುವುದೊಂದು, ನೋಡತಕ್ಕಂಥದ್ದೇ ಒಂದು ಆ ರೀತಿಯಲ್ಲಿ ಆಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಅವಸರದಿಂದ ಮಾಡಿ ಕಳುಹಿಸತಕ್ಕಂಥ ಪ್ರಸಂಗ ಬಂತು. ದೆಹಲಿಗೆ ಒಂದು ದಿವಸ ತಡವಾಗಿ ಬಂತು. ಮಾನ್ಯ ಫಿಲ್ಲೋನ್ ಅವರನ್ನು ಭೇಟಿಯಾಗಲಿಕ್ಕೆ ಸಮಯವನ್ನು ಕೇಳಿದ್ದೆ. ಅವರು ಸಮಯವನ್ನು ಕೊಟ್ಟಿದ್ದರು. ಮೆಮೊರಾಂಡಂನ್ನು ಮಾಡಲಿಕ್ಕೆ ತಡ ಆಗಿದ್ದರಿಂದ ಆ ದಿವಸ ಬರಲಿಕ್ಕೆ ಆಗಲಿಲ್ಲ. ಫಿಲ್ಲೋನ್ ಅವರಿಗೆ ಕೇಳಿಕೊಂಡೆ ಈ ದಿವಸ ಆಗಲಿಲ್ಲ, ಮತ್ತೊಂದು ದಿವಸಕ್ಕೆ ಅವಕಾಶ ಕೊಡಿ ಬರುತ್ತೇನೆ ಎಂದು ಕೇಳಿದೆ. ಆದ್ದರಿಂದ ಇದು ಬಿಸಿನೆಸ್ ಅಡ್ವೈಸರಿ ಕಮಿಟಿ ಆಗುವ ವರೆಗೂ ಕಾಯತಕ್ಕಂಥ ಅಗತ್ಯ ಇಲ್ಲ. ಎಲ್ಲಾ ನಿಲುವಳಿ ಸೂಚನೆಗಳಿಗಿಂತ ಅತ್ಯಂತ ಮಹತ್ವವಾದದ್ದು, ಈ ಅಭಾವಪರಿಸ್ಥಿತಿಗೆ ಸಂಬಂಧಪಟ್ಟಿರತಕ್ಕಂಥದ್ದು ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ ಆದರೆ ಈ ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿಲ್ಲ ಇದು ಪರಂಪರೆ ಇದು ಸನ್ಮಾನ್ಯ ವೀರಪ್ಪ ಮೊಯಿಲಿಯವರಿಗೂ ಗೊತ್ತಿದೆ. ಇಂಥ ಪರಿಸ್ಥಿತಿ ಬಂದಾಗ ಸರ್ಕಾರ ತಾವಾಗಿಯೇ ಇದರಲ್ಲಿ ಚರ್ಚೆ ಮಾಡಬಹುದು. ಎಂದು ಹೇಳಿದಾಗ ಈ ನಿಲುವಳಿ ಸೂಚನೆ ಬರುವುದಿಲ್ಲ. ಮೂರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ, ಬಾಕಿ ವಿಚಾರವನ್ನು ಈಗಲೇ ತೆಗೆದುಕೊಳ್ಳೋಣ. ಇದನ್ನು ಕೃಷ್ಣನ್‌ರವರೂ ಕೂಡಾ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ.

2) ರಾಜ್ಯದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಮುಚ್ಚಿರುವುದರಿಂದ ಕಾರ್ಮಿಕರಿಗೆ ತೊಂದರೆಯಾಗಿರುವುದು (ಅನಂವಂತಿ ಕೋರಿಕೆ)

೧-೦೦ ಪಿ. ಎಂ.

ಶ್ರೀ ಎಂ.ಎಸ್. ಕೃಷ್ಣನ್,—ನನಗೆ ೨-೩ ಪ್ರಶ್ನೆಗಳಿಗೆ ಸಮಾಜಾಯಿಷಿ ಕೊಡಬೇಕು. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ತಾವು ಮೊದಲೇ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆಯಿಸಿ ತೀರ್ಮಾನ ಮಾಡಿದ್ದರೆ, ಈ ತರಹ ಗೊಂದಲವಾದ ವಾತಾವರಣ ಬರುತ್ತಿರಲಿಲ್ಲ. ಪ್ರಿಯಾರಿಟಿ ಯಾವ ಯಾವುದಕ್ಕೆ ಕೊಡಬೇಕೆಂದು ಯೋಚನೆ ಮಾಡಬೇಕಾಗಿದೆ ಅದನ್ನು ಮಾಡಿ, ಮಾಡುತ್ತೀರೆಂದು ನಂಬಿಕೆ ನನಗೆ ಇದೆ.

ಎರಡನೆಯದಾಗಿ ಕೆಲವು ಸದಸ್ಯರು ಮಾತನಾಡುವಾಗ ಬರಗಾಲದ ಪರಿಸ್ಥಿತಿ ಬಗ್ಗೆ ಮಾತನಾಡುವುದು ಮುಖ್ಯ ಇದು ಮುಂಖ್ಯವಲ್ಲ ಎಂದು ಹೇಳಿದ್ದಾರೆ. ಬರಗಾಲದ ವಿಷಯ ಬಹಳ ಮುಖ್ಯವಾದ ವಿಷಯ. ಕೈಗಾರಿಕೆಯಲ್ಲಿನ ಮುಂಗ್ಗಟ್ಟು ಮುಂಖ್ಯವಲ್ಲ ಎಂದು ನಾನೂ ಹೇಳುವುದು ಸರಿಯಲ್ಲ ಸರ್ಕಾರದ ವಿಫಲತೆಗಳನ್ನೆಲ್ಲಾ ಎತ್ತಿ ತೋರಿಸಿ ಅದನ್ನೆಲ್ಲಾ ಸೂಚಿಸಬೇಕು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಯಾರಿಗೂ ಇಲ್ಲ. ಆದೇರೀತಿಯಲ್ಲಿ ನಿಮಗೆ ನಿಳುವಳಿ ಸೂಚನೆ ಕಳುಹಿಸಿದೆ. ಈಗ ಕೈಗಾರಿಕಾ ವಲಯದಲ್ಲಿ ಮುಗ್ಗಟ್ಟು ಬಂದಿದೆ. ಇದರಲ್ಲಿ ಸರ್ಕಾರದ ವಿಫಲತೆ ಇದೆ. ಈಗಾಗಲೇ ಅನೇಕ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ತಾವು ಕಾರ್ಮಿಕರ ವಿಚಾರವನ್ನು ಮಾತನಾಡಬಾರದೆಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಬರಗಾಲದ ವಿಷಯಂವು ಎಷ್ಟು ಮುಖ್ಯವೋ ಅಷ್ಟೇ ಮುಂಖ್ಯ ಈ ಕಾರ್ಮಿಕರ ವಿಷಯ. ಕೈಗಾರಿಕೆಯ ವಿಷಯ ನೂರಾರು ಹತ್ತು ಸಾವಿರ ಸಂಸಾರಗಳು, ಸಾವಿರಾರು ಜನರು ಬೀದಿಪಾಲಾಗಿದ್ದಾರೆ. ದಾವಣಗೆರೆಯಲ್ಲಿ, ಅನೇಕ ಕಾರ್ಖಾನೆಗಳು ಪ್ಯೆಸೂರಿನ ಕೆ.ಆರ್.ಮಿಲ್ ಮಂತ್ತು ಹೀಗೆ ಅನೇಕ ಇಂಜಿನಿಯರಿಂಗ್ ಕಾರ್ಖಾನೆಗಳು ಮುಂಚ್ಚಿಕೊಂಡಿವೆ. ಸಣ್ಣ ಸಣ್ಣ ಕಾರ್ಖಾನೆಗಳು ಸುಮಾರು ೬,೦೦೦ ನಮ್ಮ ರಾಜ್ಯದಲ್ಲಿ ಸರ್ಕಾರದ ವೈಫಲ್ಯತೆಯಿಂದ ಮುಂಚ್ಚಿ ಹೋಗಿವೆ ಎಂದು ಹೇಳುತ್ತೇನೆ. ಇವೊತ್ತು ಏಕೆ ಈ ಕಾರ್ಖಾನೆಗಳು ಮುಚ್ಚಿ ಹೋಗಿವೆ ಈ ವಿಷಯ ಚರ್ಚೆಗೆ ಅವಕಾಶ ಇರಬೇಕು ಇದರ ಬಗ್ಗೆ ಸರ್ಕಾರದ ನೀತಿ ಸರಿಯಾಗಿ ಇರಬೇಕು. ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುವ ಅವಕಾಶ ಇರಬೇಕು. ಸಾವಿರಾರು ಜನರು ನಿರ್ಗತಿಕರಾಗಿದ್ದಾರೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರದ ನೀತಿಯಿಂದಾಗಿ ಇಂತಹ ಪರಿಸ್ಥಿತಿ ಉದ್ಭವಿಸಿದೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ ಸರ್ಕಾರದವರು ಏನು ಹೇಳಿದ್ದಾರೆ. ವಿಶೇಷವಾಗಿ ಅವರ ಪಕ್ಷದಲ್ಲಿಯೇ ಇದರ ಬಗ್ಗೆ ಭಿನ್ನಾಭಿಪ್ರಾಯ ಇದೆ. ಶ್ರೀ ಜೀ ವಿಜಯ ಹೇಳುತ್ತಾರೆ, ೭೦ ಸಾವಿರ ಕೈಗಾರಿಕೆಗಳು ಇದೆ, ಎಷ್ಟಕ್ಕೆ ಲೈಸೆನ್ಸ್ ಕೊಟ್ಟಿದೆ, ಎಷ್ಟು ಕೈಗಾರಿಕೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ ಭಿನ್ನಾಭಿಪ್ರಾಯ